| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**H2 – 2025**

ವಿಷಯ ಸಂಕೇತ
Subject Code **16**

# ಐಚ್ಛಿಕ ಕನ್ನಡ / OPTIONAL KANNADA

**ಸಮಯ: 3 ಗಂಟೆ 00 ನಿಮಿಷಗಳು** **(ಒಟ್ಟು ಪ್ರಶ್ನೆಗಳ ಸಂಖ್ಯೆ : 48)** **ಗರಿಷ್ಠ ಅಂಕಗಳು: 80**

Time : 3 Hours 00 Minutes] [Total No. of Questions : 48] [Max. Marks : 80

**ಸೂಚನೆಗಳು :**

1. **ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.
2. ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.
3. ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

16

## ಅ–ವಿಭಾಗ

I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. **(5 × 1 = 5)**

1) ಸಭಾ ರಸಭಂಗವಾಗುತ್ತದೆ ಎಂದು ಭಯಪಟ್ಟವನು.

ಅ. ಆದಿದೇವ ಆ. ಅಕಂಪನ

ಇ. ಇಂದ್ರ ಈ. ಹರಿಕಾಂತ

2) ಹಂದಿ ನೆಲಕ್ಕುರುಳಿದ್ದು ಇವರ ಬಾಣದ ಹೊಡೆತದಿಂದ.

ಅ. ಅರ್ಜುನ ಆ. ಶಿವ

ಇ. ನಂದಿ ಈ. ಶಿವಗಣ

3) ‘ನಿಲ್ಲು ನಾಗಿ ನಿಲ್ಲು ನಿನ್ನ ನೋಡಬೇಕು’ ಎಂದುದು?

ಅ. ತೇರು

ಆ. ಹಸು

ಇ. ಕರು

ಈ. ನೀರು

4) ‘ತಿರೆಯ ಪೊರೆದವರೆನ್ನ ಸಹಕರ್ಮಿಗಳು, ಧರ್ಮಿಗಳು!’ ಎಂಬ ರೈತನ ಮಾತಿನಲ್ಲಿ ಹೇಳಲಾಗಿರುವ ಸಹಕರ್ಮಿಗಳು ಎಂದರೆ?

ಅ. ಶಿಲ್ಪಿಗಳು

ಆ. ಪುರೋಹಿತರು

ಇ. ರೈತರು

ಈ. ಜಲಗಾರರು

5) ಬಡವರಿಗೆ ಇವರೇ ಗತಿ.

ಅ. ಪಾರ್ವರು

ಆ. ಕಬ್ಬಿಗರು

ಇ. ಬಡವರು

ಈ. ಯುವಕರು

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿಮಾಡಿ. **(5 × 1 = 5)**

6) ‘ಸೌದಾಮಿನಿ’ ಪದದ ಅರ್ಥ __________

7) ‘ಶೃಂಗಾರ’ ಪದದ ತದ್ಭವ ರೂಪ __________

8) ‘ಇಹ’ ಪದದ ವಿರುದ್ಧಾರ್ಥಕ ರೂಪ _________

9) ಪುರ + ಅರಿ ಪದಗಳನ್ನು ಕೂಡಿಸಿ ಬರೆದ ರೂಪ _________

10) ಓಡೋಡಿ ಎಂಬುದು _________ ಗೆ ಉದಾಹರಣೆ.

(ದ್ವಿರುಕ್ತಿ, ಪರ, ಸಿಂಗಾರ, ಪುರಾರಿ, ಮಿಂಚು, ಜೋಡಿಪದ)

III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ: **(1 × 5 = 5)**

11) ಅ. ಕಿಟಿ – ನಿಚ್ಚ

ಆ. ಮಣಿ – ಬಲ್ಲಿದ

ಇ. ಧರಣೀಶ – ಮಹೇಶ್ವರ

ಈ. ಬಡವ – ರಾಜ – ನೃಪ

ಉ. ನಿತ್ಯ – ಹರಳು–ಸೋಲು

– ಹಂದಿ

IV. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ:– **(5 × 1 = 5)**

12) ಪರುಷ ಮುಟ್ಟಲು ಯಾವುದು ಕನಕವಾಗುತ್ತದೆ?

13) ಆಪತ್ತಿನಲ್ಲಿ ಏನು ಇರಬೇಕು?

14) ಕುಲಕೋಟಿಯನ್ನು ಉದ್ಧರಿಸುವವಳು ಯಾರು?

15) ಜಲಗಾರನ ಆರತಿ ಯಾವುದು?

16) ಜಗದ ಪಾಪ ನುಂಗುವವನು ಯಾರು?

## ಆ–ವಿಭಾಗ

V. ಕೆಳಗಿನವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **(4 × 2 = 8)**

17) ಮಣಿಮಯ ಪೀಠದಲ್ಲಿ ಮತ್ತು ಕನಕ ಪೀಠದಲ್ಲಿ ಕುಳಿತಿದ್ದವರು ಯಾರು ಯಾರು?

18) ಮರಳ ಲಿಂಗವನ್ನು ಅರ್ಜುನನು ಹೇಗೆ ಪೂಜಿಸಿದನು?

19) ಮಾಯೆಯು ಕನಸಿನ ಬಗ್ಗೆ ಮಾತನಾಡಿದಾಗ ಅಲ್ಲಮ ಕೊಡುವ ಉತ್ತರವೇನು?

20) ಯಾರ್‍ಯಾರು ವಿಶ್ವಾಸಕ್ಕೆ ಅರ್ಹರಲ್ಲ ಎಂದು ಚಿಕ್ಕುಪಾಧ್ಯಾಯ ಕವಿ ಹೇಳಿದ್ದಾನೆ?

21) ಇಳಿವಯಸ್ಸಿನ ಹೆಂಡತಿಯನ್ನು ಹೇಗೆ ನೋಡಿಕೊಳ್ಳಬೇಕು ಎಂದು ಸಂಚಿ ಹೊನ್ನಮ್ಮ ಹೇಳಿದ್ದಾಳೆ?

VI. ಕೆಳಗಿನವುಗಳಲ್ಲಿ **ನಾಲ್ಕು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

22) ನಿಚ್ಚಂ ಮೆಚ್ಚುಗೊಳ್ವಳ್ ಇಂದ್ರನ ಕೈಯೊಳ್

23) ಮುಕ್ಕಣ್ಣಂ ಮರುಗಿ ಮನದೆ ಸಿಡಿಮಿಡಿಗೊಂಡಂ

24) ಆಡಿದನಾಡಿದನಾಹಾ ಶಂಕರ

25) ಸಿರಿಗೆಯುದಾರತೆ ವಿದ್ಯಾಪರಿಣತೆಗುರೆ ವಿನಯಂ

26) ಅಲ್ಲಿಪ್ಪನಿಲ್ಲಿಪ್ಪ ನೆಲ್ಲಿಪ್ಪನೆನಬೇಡ

VII. ಕೆಳಗಿನವುಗಳಲ್ಲಿ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2 × 4 = 8)**

27) ನೀಲಾಂಜನೆಯ ಆಯುಷ್ಯ ಇದ್ದಕ್ಕಿದ್ದಂತೆ ಮುಗಿದುಹೋದ ಸಂದರ್ಭವು ಆದಿದೇವನ ಮನದಲ್ಲಿ ಹುಟ್ಟಿಸಿದ ಭಾವನೆಗಳೇನು? ವಿವರಿಸಿ.

28) ವಿದ್ಯೆಯ ಜೊತೆ ವಿನಯ ಏಕೆ ಮುಖ್ಯವಾಗುತ್ತದೆ ಎಂಬುದನ್ನು 'ಸೌಜನ್ಯವಿದೂರನಾದೆನ್' ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.



16 Optional Kannada 04-2025.indd 4 16-04-2025 12:43:42

29) ಕುಂಬಾರ ಗುಂಡಯ್ಯನ ಭಕ್ತಿಗೆ ಶಿವನು ಒಲಿದ ಬಗೆಯನ್ನು ವಿವರಿಸಿ.

30) ವ್ಯಸನಗಳು ಮನುಷ್ಯನನ್ನು ಹೇಗೆ ನಾಶ ಮಾಡುತ್ತವೆ ಎಂಬುದನ್ನು ಸರ್ವಜ್ಞನ ವಚನಗಳ ಹಿನ್ನೆಲೆಯಲ್ಲಿಚರ್ಚಿಸಿ.

VIII. ಕೆಳಗಿನವುಗಳಲ್ಲಿ **ಒಂದು** ಪದ್ಯದ ಭಾವಾರ್ಥ ವಿವರಿಸಿ. **(1 × 4 = 4)**

31) ಬಾಲೆ ನೀರಿಗೆ ಹೆಪ್ಪನೆರೆದರೆ
ಹಾಲಿನಂತಿರೆ ಹೆತ್ತು ಭುಂಜಿಸಿ
ಬಾಳಿದವರಾರುಂಟು ಭಾವಿಸಲಾ ಪ್ರಕಾರದಲಿ।
ಕಾಳುಮತಿಗಳಿಗೆನಿತು ಬುದ್ಧಿಯ
ಹೇಳಿದರೆ ಫಲವೇನು ಸಾಕೀ
ಖೂಳೆಗಾನಿನ್ನೇನ ಮಾಡುವೆ ವಿಮಳೆ ಕೇಳೆಂದ।।

32) ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ।।

**ಇ–ವಿಭಾಗ**

IX. ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

33) ತೇರಿನ ದಿನ ಸೀರೆಯವನು ಏನೆಂದು ಕೂಗುತ್ತಿದ್ದನು?

34) ತಂದೆ ತಾಯಿ ನಾಗಿಯನ್ನು ಹೇಗೆ ಹುಡುಕಿದರು?

X. ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

35) ನಾಗಿಯ ಪಾತ್ರದ ಮೂಲಕ ಯೌವ್ವನದ ಮನಃಸ್ಥಿತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ?

36) ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ಚರ್ಚಿಸಿ.

## ಈ–ವಿಭಾಗ

XI. ಕೆಳಗಿನವುಗಳಲ್ಲಿ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

37) ಜಲಗಾರನ ಶಿವ ಎಲ್ಲೆಲ್ಲಿದ್ದಾನೆ?

38) ಗುಡಿಗಳು ಯಾರ ಗೂಡುಗಳು ಎಂದು ತಿರುಕ ಹೇಳುತ್ತಾನೆ?

39) ಊರ ತೋಟಿ ಮತ್ತು ಜಗದ ತೋಟಿಗಳಾರು?

XII. ಕೆಳಗಿನವುಗಳಲ್ಲಿ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2 × 3 = 6)**

40) ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?

41) ಒಂದು ದಿನವಾದರೂ ವಿಶ್ರಾಂತಿಯಿರಲಿ.

42) ನಿಜವಾದ ಶಿವನು ಜಲಗಾರ ಶಿವನು.

XIII. ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

43) ಜಲಗಾರ ಮತ್ತು ಶಿವನ ನಡುವಿನ ಮಾತುಕತೆಯನ್ನು ಸಂಗ್ರಹಿಸಿ ಬರೆಯಿರಿ.

44) ಕಾಯಕ ತತ್ವದ ಮಹತ್ವವನ್ನು ಜಲಗಾರ ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

## ಉ–ವಿಭಾಗ

XIV. ಕೆಳಗಿನವುಗಳಲ್ಲಿ **ಒಂದು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **(1 × 4 = 4)**

45) ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿರೆ

46) ಅರಸ ರಕ್ಕಸನಂತೆ ವರ ಮಂತ್ರಿ ಹುಲಿಯಂತೆ
ಬರೆವಾತ ನಾಡ ನರಿಯಂತೆ ಪರಿವಾರ
ಗರಗಸದಂತೆ ಸರ್ವಜ್ಞ



16 Optional Kannada 04-2025.indd 6 16-04-2025 12:43:42

XV. ಕೆಳಗಿನವುಗಳಲ್ಲಿ **ಒಂದರ** ಅಲಂಕಾರ ಹೆಸರಿಸಿ, ಸಮನ್ವಯಗೊಳಿಸಿ. **(1 × 4 = 4)**

47) ನಲ್ಲ ಒಲ್ಲಿಯನೊಲ್ಲ ನೆಲ್ಲಕ್ಕಿ ಬೋನೊಲ್ಲ
ಅಲ್ಲವನು ಒಲ್ಲ ಮೊಸರೊಲ್ಲ ಯಾಕೊಲ್ಲ

48) ಭರತೇಶ ಚಕ್ರವರ್ತಿಯು ಕಡಲ ಮಧ್ಯದ ಕಮಲದಂತೆ
ಈ ಭವಸಾಗರದಲ್ಲಿ ಇದ್ದೂ ಇಲ್ಲದಂತಿದ್ದನು.



16 Optional Kannada 04-2025.indd 7 16-04-2025 12:43:42

16 Optional Kannada 04-2025.indd 8 16-04-2025 12:43:42